ಸಿ.ಸಿ .ನಂ.126/2023 ಪಿಡಬ್ಲೂಃ 1

ದಿನಾಂಕಃ 10-01-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಎನ್ ಎಮ್ ಎನ್ ವಕೀಲರಿಂದಃ**

23. ಎನ್ ವಿ ನಾಯ್ಕ ರವರು ಹಾಜರು ಪಡಿಸಿದ ವರದಿಯ ಪ್ರಕಾರ ಆರೋಪಿ ದಿಃ 27-05-2020 ರಂದು ಹಣವನ್ನು ರಸೀದಿ ಸಂಖ್ಯೆ 737, 738, 739, ಹಾಗೂ 740 ರ ಪ್ರಕಾರ ಹಣವನ್ನು ಕಟ್ಟಿರುತ್ತಾರೆ ಎಂದರೆ ಸಾಕ್ಷಿ ಈ ಹಿಂದೆ ದುರುಪಯೋಗ ಪಡಿಸಿಕೊಂಡಿರುವ ಹಣವನ್ನು ಜಮಾ ಮಾಡಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ರಸೀದಿಗಳು ನಮ್ಮ ಬ್ಯಾಂಕಿನ ಹಾಗೂ ಗ್ರಾಹಕರ ನಡುವಿನ ರಸೀದಿಗಳು . ಒರಿಜನಲ್ ರಸೀದಿಗಳನ್ನು ಹಣ ಕಟ್ಟಿದವರಿಗೆ ಕೊಟ್ಟಿರುತ್ತೇವೆ . ಒಂದು ಪ್ರತಿ ನಮ್ಮ ಬ್ಯಾಂಕಿನಲ್ಲಿ ಇರುತ್ತದೆ . ಮೂಲ ಪ್ರತಿಯಲ್ಲಿರುವ ಅಂಶಗಳು ನಕಲು ಪ್ರತಿಯಲ್ಲಿರುತ್ತದೆ ಎಂದರೆ ಸರಿ . 4 ರಸೀದಿಗಳ ಪ್ರತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ. ನಾಲ್ಕು ರಸೀದಿಗಳ ಅಡಿಯಲ್ಲಿ ಒಟ್ಟೂ ಎಷ್ಟು ಹಣ ಸಂದಾದುವಾಗಿದೆ ದಾಖಲಾತಿ ನೋಡಿ ಹೇಳಬೇಕು . ಅಂದಾಜು 70 ರಿಂದ 80 ಲಕ್ಷದ ಒಳಗೆ ಹಣ ಸಂದಾಯವಾಗಿರುತ್ತದೆ.

24. ತಿಮ್ಮಪ್ಪ ಪಟಗಾರರವರಿಗೆ ಸಾಲವನ್ನು ನೀಡುವಾಗ ಆರೋಪಿಯನ್ನು ಕೆಲಸದಿಂದ ಅಮಾನತ್ತು ಮಾಡಲಾಗಿತ್ತು. ಆರೋಪಿ ಅಮಾನತ್ತಿನಲ್ಲಿ ಇರುವುದರಿಂದ ತಿಮ್ಮಪ್ಪ ಹನುಮು ಪಟಗಾರವರು ಪಡೆದ ಸಾಲಕ್ಕೆ ಆರೋಪಿಯನ್ನು ಜಾಮೀನುದಾರರನ್ನಾಗಿ ಪಡೆಯುವುದಕ್ಕಿಂತ ಪೂರ್ವದಲ್ಲಿ ಅಸಿಸ್ಟೆಂಟ್ ರಜಿಸ್ಟ್ರಾರವರ ಅನುಮತಿಯನ್ನು ಪಡೆದಿರಲಿಲ್ಲ, ಆದರೆ ಜಾಮೀನನ್ನು ಪಡೆಯಬಹುದು. ಈ ರೀತಿಯಾಗಿ ಅಮಾನತ್ತಿನಲ್ಲಿರುವ ಚೀಫ್ ಎಕ್ಸಿಕ್ಯೂಟಿವ್ ಆಫೀಸರ್ ನ ಜಾಮೀನನ್ನು ಪಡೆಯಬಹುದು ಎಂದು ನಮ್ಮ ಬೈಲಾನಲ್ಲಿ ಇಲ್ಲ ಆದರೆ ಜಾಮೀನನ್ನು ಪಡೆಯಬಹುದು . ಬೈಲಾದಲ್ಲಿ ಇಲ್ಲದೇ ಇದ್ದರೂ ಜಾಮೀನನ್ನು ಪಡೆಯಬಹುದು ಎಂದು ಆಡಳಿತ ಮಂಡಳಿಯವರು ನಿರ್ಧಾರ ಮಾಡುತ್ತಾರೆ. ಎನ್ ವಿ ನಾಯ್ಕರವರನ್ನು ವಿಚಾರಣೆಗೆ ಒಳಗಾದಾಗ ಆರೊಪಿ ಸಸ್ಪೆನ್ಸನಲ್ಲಿರುವ ವಿಚಾರ ಅವರಿಗೆ ಗೊತ್ತಿತ್ತೊ ಇಲ್ಲವೋ ನನಗೆ ಗೊತ್ತಿಲ್ಲ.

ಎನ್ ವಿ ನಾಯ್ಕರವರು ವಿಚಾರಣೆಯ ಸಮಯದಲ್ಲಿ ಈ ಪ್ರಕರಣ ಸೇರಿಸಿ ಆರೋಪಿ ನಾಲ್ಕು ಜನರಿಗೆ ಜಾಮೀನು ಆಗಿರುವ ವಿಚಾರ ನಾವು ಹೇಳಿಲ್ಲ. ದಾಖಲಾತಿ ನೋಡಿ ಅವರಿಗೆ ಗೊತ್ತಗಿರುತ್ತದೆ. ಯಾವುದೇ ಒಂದು ಸಂಘದ ಚೀಫ್ ಎಕ್ಸಿಕ್ಯೂಟಿವ್ ಆಫೀಸರ್ ಗೆ ಸಂಘದ ಸದಸ್ಯತ್ವ ನೀಡುವ ಹಾಗಿಲ್ಲ ಎಂದರೆ ಸರಿಯಲ್ಲ. ಸದಸ್ಯತ್ವ ನೀಡಬಹುದು ಎಂದು ಬೈಲಾದಲ್ಲಿ ಇದೆ . ನಿಲಂಬನೆಗೆ ಒಳಪಟ್ಟ ಅಧಿಕಾರಿಯ ಜಾಮೀನನ್ನು ಪಡೆಯಲು ಬರುವುದಿಲ್ಲ ಎಂದರೆ ಸರಿಯಲ್ಲ . ಬೈಲಾವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿ ಈಗಾಗಲೇ ಹಾಜರು ಪಡಿಸಿದ್ದೇವೆ ಎಂದು ನುಡಿದಿರುತ್ತಾರೆ . ಸಾಕ್ಷಿಗೆ ಕೇಸಿನ ಕಡತವನ್ನು ತೋರಿಸಲಾಗಿ ಅದರಲ್ಲಿ ಬೈಲಾ ಇಲ್ಲ ಆದರೆ ಬೈಲಾ ಕಾಪಿ ವಕೀಲರಿಗೆ ಕೊಟ್ಟಿದ್ದೇವೆ ಎಂದು ನುಡಿದಿರುತ್ತಾರೆ. ಎನ್ ವಿ ನಾಯ್ಕರವರ ವರದಿಯಲ್ಲಿ ನಿಲಂಬಿತ ಚೀಫ್ ಎಕ್ಸಿಕ್ಯೂಟಿವ್ ಆಫೀಸರ್ ನ ಜಾಮೀನನ್ನು ಪಡೆಯಬಹುದು ಎಂದು ಬೈಲಾನಲ್ಲಿ ನಮೂದಿದೆ ಎಂದು ಎಲ್ಲೂ ನಮೂದಿಸಿಲ್ಲ ಎಂದರೆ ಸಾಕ್ಷಿ ವರದಿಯನ್ನು ನೋಡಬೇಕು ಎಂದು ನುಡಿದಿರುತ್ತಾರೆ.

25 ಸ್ಟೇಟ್ ಮೆಂಟ್ ಪ್ರಕಾರ ತಿಮ್ಮಪ್ಪ ಹನುಮು ಪಟಗಾರರವರಿಗೆ 19 ಲಕ್ಷ ರೂಪಾಯಿ ಸಾಲವನ್ನು ನೀಡಿದ ನಂತರದಲ್ಲಿ ಸದರಿ ಹಣ ಅದೇ ದಿನ ಅವರ ಖಾತೆಯಿಂದ ವರ್ಗಾಯಿಸಿದ ಬಗ್ಗೆ ಯಾವುದೇದಾಖಲಾತಿಯಲ್ಲಿ ಕಂಡು ಬರುವುದಿಲ್ಲ ಎಂದರೆ ಸಾಕ್ಷಿ ನಮ್ಮ ಬ್ಯಾಂಕಿನಿಂದ ಅವರ ಖಾತೆಗೆ ಯಾುವುದೇ ವರ್ಗಾವಣೆ ಆಗಿಲ್ಲ ಎಂದು ನುಡಿದಿರುತ್ತಾರೆ . ತಿಮ್ಮಪ್ಪ ಹನುಮು ಪಟಗಾರವರ ಸಾಲದ ಖಾತೆಗೆ ಸಂಬಂಧಪಟ್ಟಂತೆ ನಮ್ಮ ಸಂಸ್ಥೆಯನ್ನು ಬಿಟ್ಟು ಬೇರೆ ಎಲ್ಲಾದರೂ ಕೂಡ ಖಾತೆಯನ್ನು ಹೊಂದಿದ್ದರಾ ಗೊತ್ತಿಲ್ಲ. ನಮ್ಮ ಸಂಘದಲ್ಲಿ ಖಾತೆಯನ್ನು ಹೊಂದಿದ ಬಗ್ಗೆ ದಾಖಲಾತಿಯನ್ನು ನೋಡಿ ಹೇಳಬೇಕು . ಸಾಮಾನ್ಯವಾಗಿ ನಮ್ಮ ಸಹಕಾರಿಯಿಂದ ಯಾರಿಗಾದರೂ ಸಾಲವನ್ನು ನೀಡಿದಾಗ ಅವರು ನಮ್ಮ ಸಹಕಾರಿಯಲ್ಲಿ ಮಾತ್ರ ಖಾತೆಯನ್ನು ಹೊಂದಿರುತ್ತಾರೆ ಎಂದರೆ ಸರಿ . ಆ ಖಾತೆಗೆ ಸಂಬಂಧಪಟ್ಟಂತೆ ಇನ್ನೊಂದು ಖಾತೆ ಎಲ್ಲೂ ರಚಿಸಲ್ಪಟ್ಟಿರುವುದಿಲ್ಲ ಎಂದರೆ ಸಾಕ್ಷಿ ನಮ್ಮ ಸಂಘದಲ್ಲಿ ಆ ಖಾತೆ ಮಾತ್ರ ಇರುತ್ತದೆ ಬೇರೆ ಎಲ್ಲೂ ಇರುವುದಿಲ್ಲ ಎಂದು ನುಡಿದಿರುತ್ತಾರೆ. ಸಾಮಾನ್ಯವಾಗಿ ಸಾಲವನ್ನು ನೀಡುವಂತಹ ವ್ಯಕ್ತಿಗಳಿಗೆ

ವಯಸ್ಸಿನ ವಯೋಮಾನ ಇರುತ್ತದೆ ಎಂದರೆ ಸಾಕ್ಷಿ ವಯಸ್ಸಿನ ಮಿತಿ ಇಲ್ಲ , ಅವರ ಆಸ್ತಿಯ ಮೇಲೆ ಸಾಲವನ್ನು ಕೊಡಬಹುದು ಎಂದು ನುಡಿದಿರುತ್ತಾರೆ. ನಾವು ಆಸ್ತಿ ಆಧಾರದ ಮೇಲೆ ತಿಮ್ಮಪ್ಪ ಪಟಗಾರ ರವರಿಗೆ ಕೊಟ್ಟಿರುವ ಸಾಲ ಭದ್ರತೆಯ ಆಸ್ತಿ ಅದು ಅವರ ಸ್ವಂತ ಆಸ್ತಿ ಎಂಬುದನ್ನು ನೋಡಿದ್ದೇನೆ. ಆರ್ ಟಿ ಸಿ ನೋಡಿದ್ದೇನೆ. ಅವರ ಜಮೀನಿನ ಆರ್ ಟಿಸಿ ಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ . ಖಾತಾ ಉತಾರ ಹಾಜರು ಪಡಿಸಿದ್ದೇವೆ . ಸಾಕ್ಷಿ ಕೇಸಿನ ಕಡತವನ್ನು ನೋಡಿ ಖಾತಾ ಉತಾರ ಹಾಜರು ಪಡಿಸಿಲ್ಲ , ಸಿಂಪಲ್ ಮೊಡಗೇಜ್ ಇದೆ ಎಂದು ನುಡಿದಿರುತ್ತಾರೆ . ತಿಮ್ಮಪ್ಪ ಹನುಮು ಪಟಗಾರರವರು ಜೀವಂತ ಇದ್ದಾರೆ. ಸದರಿ ಅಡಮಾನದ ಕುರಿತು ತಿಮ್ಮಪ್ಪ ಹನುಮು ಪಟಗಾರರವರ ವಿರುದ್ಧ ಹಣದ ವಸೂಲಾತಿಗೆ ಸಿವಿಲ್ ನ್ಯಾಯಾಲಯಕ್ಕೆ ಕೇಸನ್ನು ಹಾಕಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ನೋಟಿಸನ್ನು ಕೊಟ್ಟು ಎಬಿಎನ್ ಕೇಸ್ ಹಾಕಿದ್ದೇವೆ ಅವಾರ್ಡ ಕೂಡ ಆಗಿದೆ ಎಂದು ನುಡಿದಿರುತ್ತಾರೆ . 2022 ರಲ್ಲಿ ಎಬಿಎನ್ ಕೇಸನ್ನು ಹಾಕಿರುತ್ತೇವೆ. ಆ ಕೇಸಿನಲ್ಲಿ ಅವಾರ್ಡ ಆದ ನಂತರ ವಸೂಲಿಯ ಕುರಿತು ಪ್ರಕರಣ ಇನ್ನೂ ದಾಖಲಿಸಿಲ್ಲ ಸಿವಿಲ್ ಕೋರ್ಟನಲ್ಲಿ ದಾಖಲಿಸಲು ಉಂಟು . ಸಾಲವನ್ನು 5 ಕಂತುಗಳಲ್ಲಿ ಭರಣ ಮಾಡಬೇಕೆಂದು ಹೇಳಿದ್ದೆವು. ಈ ಪ್ರಕರಣ ದಾಖಲಿಸುವ ಸಮಯದಲ್ಲಿ ಎರಡು ಕಂತುಗಳ ಅವಧಿ ಮುಗಿದಿತ್ತು . ಒಂದು ಅಥವಾ ಎರಡು ಕಂತು ಸಾಲದ ಹಣದ ಕಟ್ ಬಾಕಿಯಾದ ನಂತರ ಠರಾವನ್ನು ಮಾಡುತ್ತೇವೆ . ಸದರಿಯವರಿಗೆ ಹಣ ಮರುಪಾವತಿ ಮಾಡುವ ಸಾಮರ್ಥ್ಯ ಇರುವುದಿಲ್ಲ ಅದರ ಕೆಳಗಡೆ ದಿಃ 14-03-2020 ಠರಾವು ನಂ. 4/3 ಎಂದು ನಿಪಿ-6 ರಲ್ಲಿ ಪ್ರಭಾರಿ ವ್ಯವಸ್ಥಾಪಕರು ಬರೆದಿರುತ್ತಾರೆ. ಠರಾವು ನಂ. 4/3 ಸರ ದೃಢಿಕೃತ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ . ಠರಾವು ಮಾಡಿದ ಸಂದರ್ಭದಲ್ಲಿ ತಿಮ್ಮಪ್ಪ ಹನುಮು ಪಟಗಾರರವರಿಗೆ ಇನ್ನೂ ಸಾಲ ನೀಡಿರಲಿಲ್ಲ ಎಂದರೆ ಸರಿ. ಅವರು ಅರ್ಜಿ ಮಾತ್ರ ಕೊಟ್ಟಿದ್ದರು. ಸಾಲವನ್ನು ನೀಡಿದ ನಂತರ ಸಾಲದ ಹಣವನ್ನು ಸದರಿ ಜಮೀನು ಖರೀದಿಯ ಉದ್ದೇಶಕ್ಕಾಗಿ ಬಳಸಿದ್ದಾರೆಯೋ ಇಲ್ಲವೋ ನೋಡುವ ಜವಾಬ್ದಾರಿ ನಮ್ಮದಾಗಿತ್ತು ಎಂದರೆ ಸರಿಯಲ್ಲ . ಜಮೀನು ಖರೀದಿಗೆ ಎಂದು ಪಡೆದ ಸಾಲವನ್ನು ಅವರು ಯಾವುದಕ್ಕೂ ಬಳಸಬಹುದು . ಆಸ್ತಿ ಖರೀದಿಗೆ ನಾವು ಯಾವುದೇ ಸಾಲವನ್ನು ನೀಡಿರಲಿಲ್ಲ ಎಂದರೆ ಸರಿಯಲ್ಲ . ಸಾಲಕ್ಕೆ ಸಂಬಂಧಪಟ್ಟಂತೆ ಆರೋಪಿಯ

ಪಿಡಬ್ಲೂಃ 1

ಸಹಿಯನ್ನು ಅವರನ್ನು ನಿಲಂಬನೆಗೆ ಒತ್ತಡ ಹೇರಿ ಅವರಿಂದ ಬಲವಂತವಾಗಿ ಸಹಿಯನ್ನು ಪಡೆದಿರುತ್ತೇವೆ ಎಂದರೆ ಸುಳ್ಳು . ಯಾವುದೇ ನಿಲಂಬಿತ ಚೇಪ್ ಎಕ್ಸಿಕ್ಯೂಟಿವ್ ಆಫೀಸರ್ ಯಾವುದೇ ಜಾಮೀನನ್ನು ನೀಡುವಂತಿಲ್ಲ ಎಂದರೆ ಸರಿಯಲ್ಲ. ನಿಲಂಬನೆಗೆ ಒಳಪಡಿಸುವ ಮೊದಲು ಅಸಿಸ್ಟೆಂಟ್ ರಜಿಸ್ಟ್ರಾರ್ ಆಪ್ ಕೋ ಆಪರೇಟಿವ್ ಸೊಸೈಟಿಯವರು ಅನುಮತಿಯನ್ನು ಪಡೆದಿರಲಿಲ್ಲ ಅದು ಆಡಳಿತ ಮಂಡಳಿಯ ಸಮಿತಿಯ ಜವಾಬ್ದಾರಿ. ನಾವು ಯಾವತ್ತೂ ತಿಮ್ಮಪ್ಪ ಹನುಮು ಪಟಗಾರರವರಿಗೆ ಸಾಲವನ್ನು ನೀಡಿಲ್ಲ ಹಾಗೂ ಮರುಪಾವತಿಗಾಗಿ ಆರೋಪಿ ಚೆಕ್ ನ್ನು ನೀಡಿದ್ದಾರೆ ಎಂದು ಹೇಳುವುದು ಕೂಡ ಸುಳ್ಳು ಎಂದರೆ ಸರಿಯಲ್ಲ. ಸಾಲ ನೀಡಿದ್ದೇವೆ ಎಂದು ಹಾಜರು ಪಡಿಸಿದ ದಾಖಲೆಗಳಲ್ಲಿ ಕಂಡುಬಂದಂತೆಲ್ಲವೂ ಕಾನೂನು ಬಾಹಿರ ಸಾಲಕ್ಕೆ ಸಂಬಂಧಪಟ್ಟಂತಹ ದಾಖಲಾತಿಗಳು ಎಂದರೆ ಸುಳ್ಳು . ಆರೋಪಿ ಬ್ಯಾಂಕಿನಲ್ಲಿ ಒಂದು ಕೋಟಿ ರೂಪಾಯಿಯಷ್ಟು ಯಾವುದೇ ವಂಚನೆ ಮಾಡಿಲ್ಲ ಎಂದರೆ ಸರಿಯಲ್ಲ . ಆರೋಪಿಯಿಂದ ಬಲವಂತವಾಗಿ ಖಾಲಿ ಚೆಕ್ ನ್ನು ಪಡೆದು ಈ ಸುಳ್ಳು ಕೇಸನ್ನು ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ . ಸಾಲವನ್ನು ನೀಡುವ ಸಮಯದಲ್ಲಿ ಶೇಕಡ 9.25 ಬಡ್ಡಿ ಆಕರಣೆ ಮಾಡಿದ್ದೇವೆ. ಚೆಕ್ ನಲ್ಲಿ ನಮೂದು ಮಾಡಿದ ಹಣ ನಾವು ಮನಸೋ ಇಚ್ಛೆ ಬರದಂತಹ ಹಣ ಎಂದರೆ ಸರಿಯಲ್ಲ . ಈ ಪ್ರಕರಣದಲ್ಲಿ ಸಂಬಂಧಪಟ್ಟಂತೆ ಆರೋಪಿ ನಮಗೆ ಯಾವುದೇ ಹಣವನ್ನು ಕೊಡಲು ಭಾದ್ಯಸ್ಥನಾಗಿರುವುದಿಲ್ಲ ಎಂದರೆ ಸುಳ್ಳು.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.